

ಒಂದು ಭೆಟ್ಟಿಯಲ್ಲಿ ಅವರು ನನಗೊಂದು ಪ್ರಶ್ನೆ ಕೇಳಿದ್ದರು, ‘ದಿನ ಹೇಗೆ ಕಳೀತೀರಿ?’. ನಾನು ಉತ್ತರಿಸಿದೆ, ‘ಬೆಳಗ್ಗೆ ಎದ್ದು ಸಿದ್ಧವಾಗಿ ಒಂದು ಗಂಟೆ ವಾಕಿಂಗ್ ಹೋಗಿ ಬಂದು, ಸ್ನಾನ ಮಾಡಿ ತಿಂಡಿ ತಿಂದು, ಬಸ್ ಹಿಡಿದು ಆಫೀಸಿಗೆ ಹೋಗಿ, ಸಂಜೆ ಯಾರಾದ್ರೂ ಗೆಳೆಯರು ಸಿಕ್ಕರೆ ಕ್ಲಬ್ಬಿಗೆ ಹೋಗಿ, ರಾತ್ರಿ ಮನೆಗೆ ಬಂದು ಊಟ ಮಾಡಿ ಮಲಗಿದ್ರೆ... ಮುಗೀತು.’ ಮುಂದೇನೂ ಮಾತಾಡದೆ ನನ್ನ ಕಣ್ಣುಗಳನ್ನು ದಿಟ್ಟಿಸುತ್ತ ಸೌಮ್ಯವಾಗಿ ಒಮ್ಮೆ ನಕ್ಕರು. ಆ ಕ್ಷಣಕ್ಕೆ ಅದೊಂದು ಅಸಾಮಾನ್ಯ ನಗು ಎಂದಷ್ಟೇ ಅನಿಸಿತ್ತು. ಅರ್ಥವಾಗಿರಲಿಲ್ಲ. ಎಷ್ಟೋ ದಿನಗಳವರೆಗೆ ಆ ನಗು ಮರೆಯಾಗಲಿಲ್ಲ. ಒಂದು ದಿನ ಮಿಂಚಿನಂತೆ ಅರ್ಥವಾಯಿತು. ಆ ನಗು ಬೆನ್ನು ತಟ್ಟುತ್ತ ಹೇಳಿದ ಪಾಠದಂತಿತ್ತು, ತಲೆ ಸವರುತ್ತ ಹೇಳಿದ ಎಚ್ಚರಿಕೆಯಂತಿತ್ತು. ಅದರ ಅರ್ಥದ ಮೊಗ್ಗುಗಳು ನನ್ನಲ್ಲಿ ನಿತ್ಯಮಲ್ಲಿಗೆಯಂತೆ ಇನ್ನೂ ಅರಳುತ್ತಲೇ ಇವೆ.

ಕನ್ನಡ ನಾಡಿನಿಂದ ದೂರದಲ್ಲಿದ್ದುಕೊಂಡು ಕನ್ನಡವನ್ನು ಕಟ್ಟಿದ ಮಹನೀಯರು ಹಲವರಿದ್ದಾರೆ. ಕೀರ್ತಿನಾಥ ಕುರ್ತಕೋಟಿ, ಶಂಕರ ಮೊಕಾಶಿ ಪುಣೇಕರ, ಬಿ.ಸಿ. ರಾಮಚಂದ್ರಶರ್ಮ, ಜಿ.ಎಸ್. ಆಮೂರ, ವ್ಯಾಸರಾಯ ಬಲ್ಲಾಳ, ಶಾಂತಿನಾಥ ದೇಸಾಯಿ, ಗಿರೀಶ ಕಾರ್ನಾಡ, ಎಂ.ಎಸ್. ಪ್ರಭಾಕರ (ಕಾಮರೂಪಿ), ಬಿ.ಜಿ.ಎಲ್. ಸ್ವಾಮಿ, ಶ್ರೀನಿವಾಸ ಹಾವನೂರ, ಸಿ.ಎನ್. ರಾಮಮಚಂದ್ರನ್, ಜಯಂತ ಕಾಯ್ಕಿಣಿ – ಇನ್ನೂ ಹಲವರನ್ನು ಹೆಸರಿಸಬಹುದು.